99741000.
(B)

ಕರ್ನಾಟಕ ಲೋಕಾಯುಕ್ತ

ನಂ:ಕಂ.ಲೋಕ್.ಬಿಸಿಡಿ 2512/2018

ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:21/11/2018

ನೊಟೀಸು

ವಿಷಯ: ಹೆಚ್.ಎಸ್.ದೊರೈಸ್ವಾಮಿ ಎಂಬುವವರು ನಮ್ಮ ಸಂಸ್ಥೆಯಲ್ಲಿ ನೀಡಿರುವ ದೂರಿನ ಕುರಿತು.

--

ಮೇಲ್ಕಂಡ ವಿಷಯಕ್ಕೆ ಸಂಬಂದಪಟ್ಟಂತೆ ತಮಗೆ ಈ ಮೂಲಕ ಗೌರವಾನ್ವಿತ ಲೋಕಾಯುಕ್ತರವರ ಆದೇಶದಂತೆ ತಮಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಗೌರವಾನ್ವಿತ ಲೋಕಾಯುಕ್ತರವರು **ತಲಘಟ್ಟಪುರ ಕೆರೆಗೆ** ಸಂಬಂದಪಟ್ಟಂತೆ ದಿನಾಂಕ: **13-11-2018 ರಂದು ಹೊರಡಿಸಿರುವ ಆದೇಶವನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದ್ದು, ಆದೇಶದಲ್ಲಿ ತಿಳಿಸಿರುವಂತೆ ವರದಿಯೊಂದಿಗೆ ದಿನಾಂಕ:06-02-2019 ರಂದು 3-00 ಗಂಟೆಗೆ ಖುದ್ದು ಗೌರವಾನ್ವಿತ ಲೋಕಾಯುಕ್ತರವರ ಮುಂದೆ ಹಾಜರಾಗತಕ್ಕದ್ದು.**

ಗೌರವಾನ್ವಿತ ಲೋಕಾಯುಕ್ತರವರ ಆದೇಶದನ್ವಯ
23/11
ಅಪರ ನಿಭಂದಕರು ವಿಚಾರಣೆಗಳು-1
ಕರ್ನಾಟಕ ಲೋಕಾಯುಕ್ತ,ಬೆಂಗಳೂರು

To:

1) **The C.E.O., Namma Bangalore foundation, 2nd floor, No54, Rockline centre, Richmond Road, Bangalore.**

2) **Sri. Jaganath, Deputy Conservator of Forest, BBMP, Bangalore**

3) **Sri. Sathish, Chief Engineer(Lakes), BBMP, Bangalore.**

4) **The Secretary, Karnataka State Pollution Control Board, Church street Bangalore.**

5) **The Chairman, B W S S B, Cauvery Bhavan, Bangalore**

## KARNATAKA LOKAYUKTA : BENGALURU

No: Compt/Lok/BCD-2512/2018/ARE-1 Date: 13-11-2018

## ORDER

On behalf of Sri. H.S.Doreswany, who is the Complainant in this case, Smt. Chaitanya is present.

2. Sri. T. Jagannatha Rao, Deputy Conservator of Forest, Bruhat Bengaluru Mahanagara Palike is present. He has filed copy of the Proceedings of Meeting dated 07-11-2018 held with various officers under the Chairmanship of Chief Engineer (Lakes), Bruhat Bengaluru Mahanagara Palike. The said Meeting Proceedings reads as hereunder:

"**ದಿನಾಂಕ: 07-11-2018** ರಂದು ಮುಖ್ಯ ಅಭಿಯಂತರು ಕೆರೆಗಳು, ಬಿಬಿಎಂಪಿ. ರವರ ಅಧ್ಯಕ್ಷತೆಯಲ್ಲಿ ಮಾನ್ಯ ಲೋಕಾಯುಕ್ತ ಕರ್ನಾಟಕ ಸರ್ಕಾರ ರವರು ತಲಘಟ್ಟಪುರ ಕೆರೆಯ ಅಭಿವೃದ್ಧಿಗೆ ಸಂಬಂದಿಸಿದಂತೆ **ದಿನಾಂಕ: 11/09/2018** ರಂದು ನೀಡಿರುವ ನಿರ್ದೇಶನದ ಮೇರೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧಿಕಾರಿಗಳೊಂದಿಗೆ ನಡೆಸಲಾದ ಸಭೆಯ ನಡವಳಿಗಳು.

**ಸಮಯ:11.00** ಗಂಟೆ

<u>ಹಾಜರಿದ್ದವರು:</u>

| ಕ್ರಮ ಸಂಖ್ಯೆ | ಹಾಜರಿದ್ದ ಅಧಿಕಾರಿಗಳು (ಹೆಸರು ಮತ್ತು ಹುದ್ದೆ) | ಇ-ಮೇಲ್/ಮೊಬೈಲ್ ಸಂಖ್ಯೆ | ಸಹಿ |
|---|---|---|---|
| 1 | ಶ್ರೀ. ಬಿ.ವಿ.ಸತೀಶ್, ಮುಖ್ಯ ಅಭಿಯಂತರರು, ಕೆರೆಗಳು, ಬಿಬಿಎಂಪಿ | | |
| 2 | ಶ್ರೀ. ಟಿ.ಜಗನ್ನಾಥ್ ರಾವ್, ಉಪ ಅರಣ್ಯ | | |

| | | | |
|---|---|---|---|
| | ಸಂರಕ್ಷಣಾಧಿಕಾರಿಗಳು, ಕೆರೆಗಳು, ಬಿಬಿಎಂಪಿ | | |
| 3 | ಶ್ರೀ. ಎಸ್.ಎನ್. ಹೆಗಡೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೆರೆಗಳು, ಬಿಬಿಎಂಪಿ | | |
| 4 | ಶ್ರೀಮತಿ. ಭೂಪ್ರಥ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆರೆಗಳು, ಬಿಬಿಎಂಪಿ | | |
| 5 | ಶ್ರೀ. ದಿನೇಶ್.ಎಸ್ ಪರಿಸರ ಅಧಿಕಾರಿಗಳು ಕೆ.ಎಸ್.ಪಿ.ಸಿ.ಬಿ ಬೆಂಗಳೂರು | | |
| 6 | ಶ್ರೀ. ನಾಗಭೂಷಣ್ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ಮಳೆನೀರು ಗಾಲುವೆ. ಆರ್.ಆರ್.ನಗರ ವಲಯ ಬಿಬಿಎಂಪಿ | | |
| 7 | ಶ್ರೀ. ಚಂದ್ರಶೇಖರ್.ಎಸ್ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಬೆಂಗಳೂರು | | |
| 8 | ಶ್ರೀಮತಿ. ಉಷಾರಾಣಿ.ಕೆ, ಸಹಾಯಕ ಅಭಿಯಂತರರು, ಕೆರೆಗಳು, ಬಿಬಿಎಂಪಿ | | |

ಹಾಜರಿದ್ದ ಅಧಿಕಾರಿಗಳನ್ನು ಮುಖ್ಯ ಅಭಿಯಂತರರು ಕೆರೆಗಳು ರವರು ಸಬಗೆ ಸ್ವಾಗತಿಸಿ ತಲಘಟ್ಟಪುರ ಕೆರೆಯ ಅಭಿವೃದ್ಧಿ ಸಲುವಾಗಿ ಮಾನ್ಯ ಲೋಕಾಯುಕ್ತ ಕರ್ನಾಟಕ ಸರ್ಕಾರ ರವರು ದಿನಾಂಕ:11-09-2018 ರಂದು ವಿಚಾರಣೆ ನಡೆಸಿ ನೀಡಿರುವ ನಿರ್ದೇಶನದ ಅನ್ವಯ ಜಂಟಿ ಸಭೆಯನ್ನು ಕರೆಯಲಾಗಿದ್ದು ತಲಘಟ್ಟಪುರ ಕೆರೆಗೆ ಅವಶ್ಯವಿರುವ ಕೆಲಸಗಳನ್ನು ಕೈಗೊಳ್ಳಲು ಇಲಾಖಾ ವಾರು ಚರ್ಚಿಸಿ ಈ ಕೆಳಗಿನಂತೆ ನಿರ್ಣಯಿಸಲಾಯಿತು.

ತಲಘಟ್ಟಪುರ ಕೆರೆಗೆ ಎರಡು ಮಾರ್ಗಗಳಿಂದ ಕೊಳಚೆ ನೀರು ಹರಿದು ಬರುತಿದ್ದು ಈ ಕಾರಣ ಕೆರೆಯು ಮಲಿನಗೊಂಡು ಸಾರ್ವಜನಿಕರ ಉಪಯೋಗಕ್ಕೆ ತೊಂದರೆ ಯಾಗುತ್ತಿರುವುದಾಗಿ ಮೊದಲನೇ ಹಂತದಲ್ಲಿ ಕೆರೆಗೆ ಸೇರುತ್ತಿರುವ ಕೊಳಚೆ ನೀರನ್ನು ಪ್ರತ್ಯೇಕ ಮಾರ್ಗದಿಂದ ಸುರಕ್ಷಿತ ವಾಗಿ ಕೆರೆಯಿಂದ ಹೊರಗೆ ಬಿಡಬೇಕಾಗಿದ್ದು ಕೊಳಚೆ ತಿರುವು ಗಾಲುವೆ ಮಾರ್ಗಗಳನ್ನು ನಿರ್ಮಿಸಲು ಕನಿಷ್ಟ 900.00 ಎಂ.ಎಂ. ವ್ಯಾಸದ ಪೈಪ್‌ಗಳನ್ನು ಅಳವಡಿಸಿ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುವುದಾಗಿ ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಪರಿಸರ ಅಧಿಕಾರಿಗಳು ಕೆ.ಎಸ್.ಪಿ.ಸಿ.ಬಿ ಬೆಂಗಳೂರು ರವರ ಅಭಿಪ್ರಯಾಗಳನ್ನು ಕೇಳಲಾಗಿ ಸದರಿ ರವರುಗಳು ಕೊಳಚೆ ನೀರು ತಿರುಗಾಲುವೆಗಾಗಿ ಪ್ರತ್ಯೇಕ ಮಾರ್ಗಗಳನ್ನು 900.00 ಎಂ.ಎಂ. ವ್ಯಾಸದ ಪೈಪ್‌ಗಳನ್ನು ಅಳವಡಿಸಿ ನಿರ್ಮಿಸಿದಲ್ಲಿ ಕೊಳಚೆ ನೀರನ್ನು ಸುರಕ್ಷಿತವಾಗಿ ಹೊರಗೆ ಹರಿದು ಬಿಡಬಹುದಾಗಿರುತ್ತದೆ ಎಂದು ಸಭೆಯಲ್ಲಿ ಅಭಿಪ್ರಾಯಿಸಿರುತ್ತಾರೆ.

ಮುಂದುವರೆದು ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ತಲಘಟ್ಟಪುರ ಕೆರೆಯ ಮೇಲಿನ ಪ್ರದೇಶಗಳಲ್ಲಿ ಕೊಳಚೆ ನೀರಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಬಿ.ಬಿ.ಎಂ.ಪಿ ಯ 110 ಹಳ್ಳಿಗಳ ಯೋಜನೆಯನ್ನು ರೂಪಿಸಲಾಗಿದ್ದು, ಸದರಿ ಯೋಜನೆಯಲ್ಲಿ ಕೇವಲ 300.00 ಎಂ.ಎಂ. ವ್ಯಾಸದ ಪೈಪ್‌ಗಳನ್ನು ಅಳವಡಿಸಲು ಉದ್ದೇಶಿಸಲಾಗಿದ್ದು ಹೆಚ್ಚುವರಿ ವ್ಯಾಸದ ಪೈಪ್‌ಗಳನ್ನು

ಅಳವಡಿಸಲು ಯೋಜನೆಯಲ್ಲಿ ಅವಕಾಶ ಇಲ್ಲದಿರುವುದಾಗಿ ಮತ್ತು ಕೆರೆಗೆ ಪ್ರತ್ಯೇಕವಾಗಿ ತಿರುಗಾಲುವೆಯನ್ನು ನಿರ್ಮಿಸಲು ಸಹ ಯೋಜನೆಯಲ್ಲಿ ಅವಕಾಶ ಇಲ್ಲದಿರುವುದಾಗಿ ತಿಳಿಸಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ಮಳೆನೀರು ಗಾಲುವೆ. ಆರ್.ಆರ್.ನಗರ ವಲಯ ರವರು ತಲಘಟ್ಟಪುರ ಕೆರೆಯಲ್ಲಿ ಕೊಳಚೆ ನೀರು ತಿರುವುಗಾಲುವೆ ನಿರ್ಮಾಣಕ್ಕಾಗಿ ತಮ್ಮ ವಿಭಾಗದಿಂದ ಯಾವುದೇ ಕಾರ್ಯಕ್ರಮವನ್ನು ರೂಪಿಸಿರುವುದಿಲ್ಲವಾಗಿ ತಿಳಿಸಿರುತ್ತಾರೆ.

ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಗಿ ಕೆರೆಯಲ್ಲಿ ತುರ್ತಾಗಿ ಕೊಳಚೆ ನೀರನ್ನು ಸುರಕ್ಷಿತವಾಗಿ ಪ್ರತ್ಯೇಕ ಮಾರ್ಗ ಕಲ್ಪಿಸಿ ಹೊರ ಹಾಕಿ ಕೆರಯನ್ನು ಅಭಿವೃದ್ಧಿಪಡಿಸಿ ಕೇವಲ ಮಳೆ ನೀರನ್ನು ಸಂಗ್ರಹಿಸಬೇಕಾಗಿದ್ದು ಕೂಡಲೇ ಅಗತ್ಯವಿರುವ ಕೊಳಚೆ ನೀರು ತಿರುವುಆಲುವೆ ಮಾರ್ಗಗಳನ್ನು ಪಾಲಿಕೆಯ ಕೆರೆ ವಿಭಾಗದಿಂದ ಕೈಗೊಳ್ಳಲು ಅಭಿಪ್ರಾಯಿಸಲಾಯಿತು.

ಸಭೆಯಲ್ಲಿ ಹಾಜರಿದ್ದ ಪರಿಸರ ಅಧಿಕಾರಿಗಳು ಕೆ.ಎಸ್.ಪಿ.ಸಿ.ಬಿ ಬೆಂಗಳೂರು ರವರು ಕೆರೆಯಲ್ಲಿ ಮಳೆ ನೀರು ಶೇಖರಣೆಗೊಂಡ ನಂತರ ನೀರಿನ ಗುಣಮಟ್ಟದ ಪರೀಕ್ಷೆಗಳನ್ನು ನಿಯಮಿತವಾಗಿ ಕೈಗೊಂಡು ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

ಮುಖ್ಯ ಅಭಿಯಂತರರು ಕೆರೆಗಳು ಬಿ.ಬಿ.ಎಂ.ಪಿ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
**ಮುಖ್ಯ ಅಭಿಯಂತರರು**
**ಕೆರೆಗಳು, ಬಿಬಿಎಂಪಿ".**

2. Sri. T. Jagannath Rao further submitted that they have made a request with the Government for release of Rs.5.00 Crores. He submitted that he expects the Government to release the said amount for the development of lake in question in few days and on receipt of amount, developmental work will be taken to develop the lake. He also submitted that within six months from the release of the funds, the development work will be carried out. He is directed to file status report showing the steps

taken by Bruhat Bengaluru Mahanagara Palike in this regard.

3. Communicate this order to the parties.

List this case on **06-02-2019 at 03-00 p.m.**

13/11/2018

**(Justice P. Vishwanatha Shetty),**
Lokayukta,
Karnataka State.

**AS***